# ಓಡಿಹೋಗಲು ಬಯಸಿದ ಮಗು

ಸುನಯನ ವಾಲ್ಟರ್ಸ್

ಒಂದು ಸುಂದರವಾದ ಸಂಸಾರ - ತಂದೆ, ತಾಯಿ, ಎರಡು ಪುಟ್ಟ ಮಕ್ಕಳು. ಅಣ್ಣ ತಿಮೊಥಿಗೆ 5 ವರ್ಷ, ತಮ್ಮ ಸ್ಟೀವಿಗೆ 3 ವರ್ಷ. ಒಂದು ದಿನ ಛಕ್ಕನೆ ತಿಮೊಥಿ ತಂದೆಗೆ ಹೇಳಿದನು - "ಅಪ್ಪಾ, ನಾನು ಓಡಿಹೋಗಲಿದ್ದೇನೆ."

"ಏಕೆ ಮಗೂ?" - ತಂದೆ ಕೇಳಿದರು.

"ನನಗೆ ಸ್ಟೀವಿಯ ಕಾಟ ತಾಳಲಾಗುವುದಿಲ್ಲ."

"ಓ! ಹಾಗಾದರೆ ನಾನೂ ನಿನಗೆ ಕೊಂಚ ಸಹಾಯ ಮಾಡುವೆ."

- ಹೀಗೆಂದ ತಂದೆಯು ಅವನಿಗೆ ಒಂದು ಪುಟ್ಟ ಸೂಟ್‌ಕೇಸ್ ಒದಗಿಸಿಕೊಟ್ಟರು. ಅಗತ್ಯವಿದ್ದ ಸಾಮಾನು ತುಂಬಿಸಲು ತಂದೆ ಸಹಾಯ ಮಾಡಿದರು. ಕೆಲವು ಪುಸ್ತಕಗಳನ್ನೂ ಒಳಗಿಟ್ಟರು. "ಸ್ವಲ್ಪ ದೂರದ ವರೆಗೆ ನಾನೂ ನಿನ್ನೊಂದಿಗೆ ಕಳುಹಿಸಿಕೊಡಲು ಬರುತ್ತೇನೆ" - ತಂದೆಯೆಂದರು.

ಸೂಟ್‌ಕೇಸ್ ಭಾರವಾಗಿತ್ತು. ತಿಮೊಥಿ ಅದನ್ನು ಹೊರಲು ತಂದೆಯ ಸಹಾಯ ಬೇಡಿದನು. ತಂದೆ ನಿರಾಕರಿಸಿದರು. ಏಕೆಂದರೆ ಅವರಿಗೆ ಹಿಂದಿರುಗಬೇಕಾಗಿತ್ತು ಮತ್ತು ಅದನ್ನು ಪ್ರಯಾಣ ಪೂರ್ತಿ ಅವನೇ ಹೊರಬೇಕಾಗಿತ್ತು. ದಾರಿಯಲ್ಲಿ ಅವನು ಹಸಿದಾಗ ತಂದೆಯು ಅವನಿಗೊಂದು ಹ್ಯಾಮ್‌ಬರ್ಗರ್ ಕೊಡಿಸಿದರು. ಅದು ತಿನ್ನಲಾರದಷ್ಟು ದೊಡ್ಡದಿತ್ತು. ಉಳಿದ ಭಾಗವನ್ನು ಸೂಟ್‌ಕೇಸ್‌ನಲ್ಲಿ ಇಟ್ಟುಕೊಳ್ಳಲು ತಂದೆಯು ಸಲಹೆ ಇತ್ತರು. ಏಕೆಂದರೆ ಅವನಲ್ಲಿ ಬೇರೆ ಆಹಾರ ಇರಲಿಲ್ಲ.

ಮತ್ತೆ ದಾರಿಗಿಳಿದಾಗ ತಿಮೊಥಿಯ ಹೆಜ್ಜೆಗಳು ದೂರ ಹೋಗುವ ಬದಲು, ಮನೆಯತ್ತ ತಿರುಗಿದವು. ಇನ್ನು ಭಾರವಾದ ಆ ಸೂಟ್‌ಕೇಸ್ ಮಗುವಿನ ಕೈಯಲ್ಲೇ ಇತ್ತು. ಮನೆ ಮುಟ್ಟಿದಾಗ ತಂದೆಯೊಂದಿಗೆ ಒಳಗೆ ಹೋಗುವ ಬದಲಾಗಿ ತಿಮೊಥಿಯು ಮನೆಯ ಹಿಂದೆ ಹೋದನು.

ತಂದೆ-ತಾಯಿಯರು ಹಿಂದಿನ ಕಿಟಕಿಯ ಮೂಲಕ ವೀಕ್ಷಿಸಿದರು. ಸೂಟ್‌ಕೇಸ್ ತೆರೆದ ತಿಮೊಥಿಯು ಪುಸ್ತಕಗಳನ್ನು ಸ್ವಲ್ಪ ಹೊತ್ತು ನೋಡಿದನು. ಅಲ್ಲೇ ಶತಪಥ ತಿರುಗಿದ ಅವನು ಮೆಲ್ಲನೆ ಮನೆಯೊಳಗೆ ಬಂದು ಅವರಿಗೆ ಹೇಳಿದನು – "ನಾನು ತಮ್ಮ ಸ್ಟೀವಿಗೆ ಇನ್ನೊಂದು ಅವಕಾಶ ಕೊಡಲು ನಿರ್ಧರಿಸಿದ್ದೇನೆ." ಹೀಗೆ ಸೂಟ್‌ಕೇಸ್ ಖಾಲಿಯಾಯಿತು. ಪಲಾಯನ ರದ್ದಾಯಿತು.

ಸತ್ಯವೇದದಲ್ಲಿಯೂ ಓಡಿಹೋದ ಮಗನ ಕುರಿತಾದ ನಮಗೆಲ್ಲರಿಗೂ ಗೊತ್ತಿರುವ ಕಥೆಯೊಂದಿಗೆ. ಓಡಿಹೋಗಿ, ತನ್ನಿಷ್ಟದಂತೆ ನಡೆದುಕೊಂಡ ಅವನು ಸೋತು ತಂದೆಯ ಬಳಿ ಹಿಂತಿರುಗಿದನು. ಏಕೆಂದರೆ ಅವನು ಹೋದಲ್ಲಿ ಎಲ್ಲವೂ ತಪ್ಪಾಗಿತ್ತು. ತಂದೆಯ ವಿಶಾಲ ಹೃದಯ ಅವನಿಗೆ ಕ್ಷಮಾಪಣೆ ನೀಡಿತು. ಇದು ತಪ್ಪಿಹೋದ ಮಗನ ಕಥೆ (ಲೂಕ 15:11-32 ಓದಿರಿ).

ತಿಮೊಥಿಯು ತಂದೆಯಿಂದ ಅಗಲಿರಲೇ ಇಲ್ಲ. ಆದರೆ ಪಲಾಯನದ ಕ್ರಿಯೆಯಲ್ಲಿ ಎಲ್ಲೋ ಒಂದೆಡೆ ಅವನ ಮನಸ್ಸು ಬದಲಾಯಿಸಿತು. ಮನೆಗೆ ಹಿಂದಿರುಗುವ ಮನಸ್ಸಾಯಿತು. ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ನಮ್ಮ ಮನಸ್ಸು, ದಾರಿಗಳನ್ನು ಬದಲಾಯಿಸಿಕೊಳ್ಳಲು ನಿಶ್ಚಯಿಸಿದರೆ, ದೇವರು ಖಂಡಿತವಾಗಿಯೂ ನಮ್ಮನ್ನು ಕ್ಷಮಿಸಿ, ನಮ್ಮ ಪಾಪಗಳನ್ನು ತೊಳೆದು ತನ್ನಲ್ಲಿ ಸೇರಿಸಿಕೊಳ್ಳಲು ಸಿದ್ಧವಾಗಿದ್ದಾನೆ. ನೆಹೆಮೀಯ 9:17ರಲ್ಲಿ ಹೀಗೆ ಬರೆದಿದೆ : *"ನೀನಾದರೋ ಪಾಪಗಳನ್ನು ಕ್ಷಮಿಸುವವನೂ, ಕನಿಕರ, ದಯೆಗಳುಳ್ಳವನೂ, ದೀರ್ಘಶಾಂತನೂ ಕೃಪಾಳುವೂ ಆಗಿರುವ ದೇವರು."*

ಪಾಪಗಳನ್ನು ಕ್ಷಮಿಸಿದ ದೇವರು ತನ್ನ ಮಕ್ಕಳನ್ನು ತಿರಿಗಿ ಸೇರಿಸಿಕೊಳ್ಳುವವನಾಗಿದ್ದಾನೆ. ಸದಾ ನೆನಪಿಡಬೇಕಾದುದೇನೆಂದರೆ *"ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು"* (ರೋಮಾ. 4:7). ■